ಗಿಲ್‌ನೆಟ್ಟರ್ಸ್‌ಗೆ ಒಂದು ಸಾವಿರ ರೂಪಾಯಿಗಳ ಪ್ರಕಾರ ಹಣ ಪಾವತಿ ಆಗಿದೆ, ಆದಕ್ಕಿಂತ ಜಾಸ್ತಿ ಆಗಿಲ್ಲ ಎಂಬುದಕ್ಕೆ ಈ ಒಂದು ಲೆಕ್ಕವನ್ನು ಕೊಡಲಾಗಿದೆ.

ಶ್ರೀ ಎನ್.ಎಂ. ಅಡ್ಯಂತಾಯ.—ಒಂದು ವೇಳೆ ಯಾರಾದರೂ ಒಂದು ಮೀನುಗಾರಿಕೆ ರಂತುವಿನಲ್ಲಿ ಪರ್ಸಿಯನ್‌ಗೆ ಸಂಬಂಧಪಟ್ಟಂತೆ ೯ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಸೆಲ್‌ನ್ನು ಬಳಸಿದ್ದರೆ. ಟ್ರಾಲರ್ಸ್‌ಗೆ ಸಂಬಂಧಪಟ್ಟಂತೆ ೩ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಜಲ್‌ನ್ನು ಬಳಸಿದ್ದರೆ ಹಾಗೂ ಗಿಲ್‌ನೆಟ್ಟರ್ಸ್‌ಗೆ ಸಂಬಂಧಪಟ್ಟಂತೆ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಸೆಲ್‌ನ್ನು ಬಳಸಿದ್ದರೆ ಅಂತಹವರಿಗೂ ಸಹ ಸಹಾಯಧನವನ್ನು ಕೊಡುತ್ತೀರಾ?

ಶ್ರೀ ಎಂ. ರಘುಪತಿ.—ಕೊಡುತ್ತೇವೆ.

ಅಧ್ಯಕ್ಷರು.—ಈಗ ಮಾನ್ಯ ಪಂಪಾಪತಿ ಅವರು ತಮ್ಮ ಪ್ರಶ್ನೆಯನ್ನು ಹಾಕಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ವಿದ್ಯಾ ಮಂತ್ರಿಗಳು ಸಭೆಯಲ್ಲಿ ಇಲ್ಲ.

ಅಧ್ಯಕ್ಷರು —ಅವರನ್ನೂ ಕರೆಯಿಸಂತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಮೇಲ್ಮನೆಗೆ ಹೋಗಿದ್ದೆ. ಈಗ ಮಾನ್ಯ ಪಂಪಾಪತಿ ಅವರ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ವಸೂಲ್ಮಾಡುತ್ತಿರುವ ಪ್ರಯೋಗ ಶಾಲೆಯ ಶುಲ್ಕ

೧೨೬೩. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ವಸೂಲ್ಮಾಡುತ್ತಿರುವ ಪ್ರಯೋಗ ಶಾಲೆಯ ಶುಲ್ಕವನ್ನು ಸರಿಯಾಗಿ ಉಪಯೋಗ ಮಾಡಲಾಗುತ್ತಿದೆಯೇ?

ಆ) ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ಈ ರೀತಿ ವಸೂಲಾದ ಹಣವನ್ನು ಆಯಾ ಶಾಲೆ ಮತ್ತು ಕಾಲೇಜುಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಅವರವರೇ ಖರ್ಚು ಮಾಡಲು ಏಕೆ ಅವಕಾಶ ನೀಡಬಾರದು.

ಇ) ಈ ರೀತಿ ಮಾಡಲು ಅವಕಾಶವನ್ನಿಯದಿರುವುದರಿಂದ ಅನೇಕ ಶಾಲೆ ಕಾಲೇಜುಗಳಿಗೆ ಪ್ರಯೋಗ ಶಾಲೆಗಳಿದ್ದರೂ ಅವಶ್ಯ ವಸ್ತುಗಳಿಲ್ಲದೆ ನಿರುಪಯುಕ್ತವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಮಂತ್ರಿಗಳು).—

ಅ) ವಸೂಲಾದ ಹಣವನ್ನು ರಾಜ್ಯದ ರಾಜ್ಯಸ್ವ ನಿಧಿಗೆ ಜಮಾ ಮಾಡಲಾಗುತ್ತಿದೆ.

ಆ) ಪ್ರೌಢ ಶಾಲೆಗಳಲ್ಲಿ ಪ್ರಯೋಗಾಲಯಗಳ ವೆಚ್ಚಕ್ಕೆ ಬೇಕಾದ ಹಣಕ್ಕೆ ಆಯವ್ಯಯದಲ್ಲಿ ಸೂಕ್ತ ಏರ್ಪಾಟು ಮಾಡಿಕೊಳ್ಳುವಂತೆ ಕ್ರಮ ಕೈಗೊಂಡಿದೆ ಮತ್ತು ಕಿರಿಯ ಕಾಲೇಜುಗಳ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಧರ್ಮಪ್ಪ.—ಅನೇಕ ಶಾಲಾ ಕಾಲೇಜುಗಳಲ್ಲಿ ಲ್ಯಾಬರೇಟರಿಯಲ್ಲಿ ಏನೇನೂ ಇಲ್ಲದಿರುವುದು ಇದೆ. ಆಯಾಯ ಕಾಲೇಜುಗಳಲ್ಲಿ ವಸೂಲಾದ ಹಣವನ್ನು ಅಲ್ಲಿಗೆ ಏತಕ್ಕೆ ಖರ್ಚು ಮಾಡಬಾರದು ? ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಆಯಾಯ ಕಾಲೇಜಿನಲ್ಲಿ ವಸೂಲಾದ

ಹಣವನ್ನು ಅಲ್ಲಿಯೇ ಖರ್ಚು ಮಾಡಿದರೆ ಆ ಕಾಲೇಜಿನ ಪ್ರಯೋಗ ಶಾಲೆಗೆ ಅನುಕೂಲವಾಗುತ್ತದೆ. ಅದನ್ನು ತೆಗೆದುಕೊಂಡು ಇಡೀ ರಾಜ್ಯಕ್ಕೆ ಹಂಚಿದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಯ ಹಣವನ್ನು ಅಲ್ಲಿಯೇ ಖರ್ಚು ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಬಿ. ಸೋಮಶೇಖರ್.—ಆ ಬೇಡಿಕೆ ಬಹಳ ದಿನಗಳಿಂದ ಇದೆ. ತತ್ವತಃ ಅದನ್ನು ನಾನು ಒಪ್ಪುತ್ತೇವೆ. ಅದಕ್ಕೆ ಆಡಳಿತಾತ್ಮಕವಾಗಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕು. ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆ ರೀತಿ ಮಾಡಬೇಕೆಂದು ಸರ್ಕಾರಕ್ಕೆ ಕಾಳಜಿ ಇದೆ.

ಶ್ರೀ ಬಿ. ಧರ್ಮಪ್ಪ.—ಈ ತರಹ ಮಾಡುತ್ತೇವೆಂದು ಈಗಲಾದರೂ ಭರವಸೆ ಕೊಡುತ್ತೀರಾ?

ಶ್ರೀ ಬಿ. ಸೋಮಶೇಖರ್.—ಆ ರೀತಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪತ್ರಿಕೆಗಳು

ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು

೭೯೫ ಶ್ರೀ ಪಂಪಾವತಿ (ದಾವಣಗೆರೆ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಬಾರಿ ರಾಜ್ಯದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಹೆಚ್ಚಿಸಿರುವ ಎಸ್. ಎಸ್. ಎಲ್. ಸಿ. ಪರೀಕ್ಷಾ ಶುಲ್ಕಗಳಿಂದ ರಾಜ್ಯಕ್ಕೆ ಬರುವ ಒಟ್ಟು ಆದಾಯವೆಷ್ಟು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ೪,೭೭,೫೭೯

ಆ) ರೂ. ೧,೨೯,೧೯,೦೭೨-೪೭ ಪೈಸೆ

ಕಾರಂಜ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗೆ

೧೦೫೧. ಶ್ರೀ ಬಸವರಾಜ್ ಪಾಟೀಲ್ ಅನ್ವರಿ(ಔಟ್ಪೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾರಂಜ ಯೋಜನೆಯು ಎಂದಿನಿಂದ ಪ್ರಾರಂಭವಾಗಿದೆ ಹಾಗೂ ಅದರ ಅಂದಾಜು ವೆಚ್ಚ ಎಷ್ಟು ?

ಆ) ಈ ಬಗ್ಗೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಇ) ಈ ಯೋಜನೆಗೆ ಅಧಿಕ ಹಣ ಒದಗಿಸಿ ತೀವ್ರಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೈಕೊಂಡ ಕ್ರಮವೇನು ?

ಈ) ಈ ಯೋಜನೆಯಿಂದ ನಿರಾಶ್ರಿತರಾದವರಿಗೆ ಮನೆಕಟ್ಟಿಕೊಳ್ಳಲು ಹಾಡ್ಕೋ ಯೋಜನೆಯಲ್ಲಿ ಸಾಲ ಮಂಜೂರ್ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೨ನೇ ಸಾಲಿನಲ್ಲಿ ಪ್ರಾರಂಭವಾಗಿದೆ. ಮೂಲ ಅಂದಾಜು ೯.೯೦ ಕೋಟಿ ರೂ.ಗಳು ಮತ್ತು ೧೯೮೫-೮೬ನೇ ದರಪಟ್ಟಿಯ ಮೇಲೆ ತಯಾರಾದ ಪರಿಷ್ಕೃತ ಅಂದಾಜು ೮೯.೭೩ ಕೋಟಿ ರೂಪಾಯಿಗಳು.